ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ — ೧೯

'ಮುಂಜಾವು' ವಾರಪತ್ರಿಕೆ, ಕೊಪ್ಪ.

ಚಂದಾ ದರ

ಬಿಡಿ ಪ್ರತಿ ೪೦ ಪೈಸೆ
ವಾರ್ಷಿಕ ಚಂದಾ ೨೦ರೂ.
ಆಜೀವ ಚಂದಾ ೨೦೦ರೂ

ಜಾಹೀರಾತು ದರ

(ಕಾಲಂ ಸೆಂ. ಮೀ. ಗೆ)
ಮುಖಪುಟದಲ್ಲಿ ... ರೂ.
ಇತರೆಡೆ ... ೪ ರೂ.

ಸಂಪುಟ ೧ ಸಂಚಿಕೆ ೩೦ ಕೊಪ್ಪ ೨-೧-೯೮೦. ಭಾನುವಾರ ಬೆಲೆ ೪೦ ಪೈಸೆ

"ದೇಶ ಕಷ್ಟದಲ್ಲಿದೆ; ನಿಮ್ಮ ಬೆಂಬಲ ಬೇಕು"

—ಶೃಂಗೇರಿ ಮತದಾರರಲ್ಲಿ ಪ್ರಧಾನಿ ಇಂದಿರಾ ಮನವಿ

ಶೃಂಗೇರಿ: "ಕರ್ನಾಟಕದ ಬಗ್ಗೆ, ಅದರಲ್ಲೂ ಈ ಭಾಗದ ಜನರ ಬಗ್ಗೆ ನನಗೆ ಬಹಳ ಮಮತೆ. ಏಕೆಂದರೆ ನನ್ನ ಕಷ್ಟಕಾಲದಲ್ಲಿ ಸಹಾಯ ಮಾಡಿದವರು ನೀವು" ಎಂದು ಶ್ರೀಮತಿ ಇಂದಿರಾ ಗಾಂಧಿ ಹೇಳಿದರು. ಅವರು ಡಿ. ೨೮ರಂದು ಇಲ್ಲಿನ ಗಾಂಧಿ ಮೈದಾನದಲ್ಲಿ ಚುನಾವಣಾ ಪ್ರಚಾರ ಭಾಷಣ ಮಾಡುತ್ತಿದ್ದರು.

ಅವರು ಸಂಜೆ ೫.೩೦ಕ್ಕೆ ಮುಖ್ಯ ಮಂತ್ರಿ ಗುಂಡೂರಾಯರ ಜೊತೆ ಹೆಲಿಕಾಪ್ಟರಿನಲ್ಲಿ ಬಂದಿಳಿದಾಗ ಸುಮಾರು ನಾಲ್ಕೈದು ಸಾವಿರ ಜನ ಗಾಂಧೀ ಮೈದಾನದಲ್ಲಿ ಕಾದಿದ್ದರು.

ಚುನಾವಣೆ ಬಹು ಮುಖ್ಯ

"ಚುನಾವಣೆಗಳು ಬಹಳ ಮುಖ್ಯ. ಏಕೆಂದರೆ ನೀವು ಆರಿಸುವ ಅಭ್ಯರ್ಥಿ ಕೆಲವು ಧ್ಯೇಯಾದರ್ಶಗಳಿಗೆ ಬದ್ಧನಾಗಿದ್ದು, ದೇಶದ ಸಮಗ್ರತೆಗಾಗಿ ದುಡಿಯುವುದಲ್ಲದೆ ಬಡವರ ಹಿತರಕ್ಷಣೆಗಾಗಿ ಸಹ ಕೆಲಸ ಮಾಡಬೇಕು. ಕಾಂಗ್ರೆಸ್ ಪಕ್ಷ ಈ ಕೆಲಸಕ್ಕಾಗಿ ಕಂಕಣಬದ್ಧವಾಗಿದೆ" ಎಂದು ಶ್ರೀಮತಿ ಗಾಂಧಿ ಹೇಳಿದರು.

ಅವರು ಮುಂದುವರಿದು "ನಮ್ಮ ಕುಟುಂಬ ಈ ಧ್ಯೇಯಗಳಿಗಾಗಿಯೇ ಮೊದಲಿಂದಲೂ ದುಡಿದಿದೆ. ಸ್ವಾತಂತ್ರ್ಯಕ್ಕಾಗಿ ಹೋರಾಟ, ಸ್ವಾತಂತ್ರ್ಯಾನಂತರ ದೇಶ ಕಟ್ಟುವ ಕೆಲಸ ಇವುಗಳಲ್ಲಿ ನಮ್ಮ ಕುಟುಂಬ ಸಕ್ರಿಯವಾಗಿ ದುಡಿದಿದೆ." ಎಂದರು.

"ನಮ್ಮ ಮುಂದಿನ ಅತಿ ಮುಖ್ಯ ಕರ್ತವ್ಯವೆಂದರೆ ಬಡತನದ ನಿವಾರಣೆ. ಅತ್ಯಂತ ದುರ್ಬಲರು, ಕಡು ಬಡವರಿಗಾಗಿ ನಮ್ಮ ೨೦ ಅಂಶಗಳ ಕಾರ್ಯಕ್ರಮ ರೂಪಿಸಲಾಗಿದೆ" ಎಂದ ಶ್ರೀಮತಿ ಗಾಂಧಿ, "ಈ ವರೆಗಿನ ನಮ್ಮ ಪ್ರಗತಿಯಿಂದ ನಮಗೆ ತೃಪ್ತಿಯಾಗಿಲ್ಲ. ವಿಶಾಲ ಜನ ಸಂಖ್ಯೆಯಿಂದಾಗಿ ಪ್ರಗತಿ ಕುಂಠಿತವಾಗಿದೆ" ಎಂದರು.

ಸಾಮಾಜಿಕ ಸಾಮರಸ್ಯ

"ಕಾಂಗ್ರೆಸ್ ಎಲ್ಲಾ ಧರ್ಮ–ಜಾತಿಗಳನ್ನೂ ಸಮಾನವಾಗಿ ಕಾಣುತ್ತಿದೆ. ಅಲ್ಪಸಂಖ್ಯಾತರನ್ನು ರಕ್ಷಿಸುವುದೆಂದರೆ ಬಹುಸಂಖ್ಯಾತರನ್ನು ಕಡೆಗಣಿಸುವುದಲ್ಲ. ಅವರನ್ನು ಇನ್ನಷ್ಟು ಬಲಪಡಿಸುವುದು. ಸಮಾಜದ ಎಲ್ಲ ಪಂಗಡ–ವರ್ಗಗಳ ನಡುವೆ ಸಾಮರಸ್ಯ ಇದ್ದರೆ ಮಾತ್ರ ದೇಶಕ್ಕೆ ಪ್ರಗತಿ" ಎಂದು ಪ್ರಧಾನಿ ನುಡಿದರು. ಯುವಜನರಿಗಾಗಿ, ಮಹಿಳೆಯರಿಗಾಗಿ ತಮ್ಮ ಪಕ್ಷ ಬೇರೆ ಬೇರೆ ಯೋಜನೆಗಳನ್ನು ಹೊಂದಿದೆಯೆಂದರು.

"ದೇಶದ ಪ್ರತಿಷ್ಠೆ ಹೆಚ್ಚಿದೆ"

ಇಂದು ಸ್ಥಳೀಯ ಸಮಸ್ಯೆಗಳು ರಾಜ್ಯಕ್ಕೂ, ರಾಜ್ಯಗಳ ಸಮಸ್ಯೆಗಳು ದೇಶಕ್ಕೂ, ದೇಶದ ಸಮಸ್ಯೆಗಳು ಅಂತರ ರಾಷ್ಟ್ರೀಯ ಸಮಸ್ಯೆಗಳಿಗೂ ಪ್ರಭಾವ ಬೀರುತ್ತವೆ. ಆದ್ದರಿಂದ ನಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ವಿಶ್ವದಲ್ಲಿ ನಮಗೆ ಗೌರವ, ನಮ್ಮ ಮಾತಿಗೆ ಬೆಲೆ ಇರಬೇಕಾಗುತ್ತದೆ. ನೀವೇ ನೋಡುತ್ತಿರುವಂತೆ, ಇಂದು ಬೇರೆ ಬೇರೆ ದೇಶಗಳು ನಮ್ಮ ಹತ್ತಿರ ಬರುತ್ತಿವೆ, ನಮಗೆ ಹೆಚ್ಚೆಚ್ಚು ಜವಾಬ್ದಾರಿ ವಹಿಸುತ್ತಿವೆ" ಎಂದ ಅವರು, "ನಮ್ಮ ಕಾರ್ಯಕ್ರಮಗಳನ್ನು ಟೀಕಿಸುವವರು ಅವುಗಳ ಬದಲು ದೇಶಕ್ಕೆ ಬೇರೆ ಕಾರ್ಯಕ್ರಮಗಳನ್ನು ಕೊಡಲು ಅಸಮರ್ಥರಾಗಿದ್ದಾರೆ" ಎಂದು ಟೀಕಿಸಿದರು.

"ನನ್ನ ಕಷ್ಟದ ದಿನಗಳಲ್ಲೆಲ್ಲ ನಿಮ್ಮ ಸಹಾಯ ಕೇಳಿದ್ದೇನೆ. ಈಗಲೂ ನಮ್ಮ ದೇಶ ಕಷ್ಟದಲ್ಲಿದೆ. ಅದಕ್ಕೇ ನಿಮ್ಮ ಸಹಾಯ ಕೇಳಲು ಬಂದಿದ್ದೇನೆ. ನಮ್ಮ ಅಭ್ಯರ್ಥಿ ಬಿ. ರಾಮಯ್ಯನವರನ್ನು ಹಾಗೂ ಕರ್ನಾಟಕದ ಎಲ್ಲ ಹಿಂದುಳಿದವರ ಬಗ್ಗೆ ನಮ್ಮ ಕಾರ್ಯಕ್ರಮಗಳನ್ನು ಬೆಂಬಲಿಸಿ. ನಮ್ಮ ಚಿಹ್ನೆ ಹಸ್ತ. ಎಲ್ಲರಿಗೂ ನಮಸ್ಕಾರ" ಎಂದು ಭಾಷಣ ಮುಗಿಸಿದರು.

ಅವರ ಇಂಗ್ಲಿಷ್ ಭಾಷಣವನ್ನು ಮುಖ್ಯಮಂತ್ರಿ ಗುಂಡೂರಾವ್ ಭಾಷಾಂತರ ಮಾಡಿದರು. ಮೊದಲಿಗೆ ಬೇಗಾನೆ ರಾಮಯ್ಯ ಸ್ವಾಗತಿಸಿದರು.

ಮಸೀದಿ, ಚರ್ಚ್‌ಗೆ ಬೇಗಾನೆ

ಕೊಪ್ಪ: ಡಿ. ೩೧ರ ಶುಕ್ರವಾರ ಎರಡನೇ ಬಾರಿಗೆ ಬೇಗಾನೆ ರಾಮಯ್ಯ ಇಲ್ಲಿನ ಜಾಮಿಯಾ ಮಸೀದಿಗೆ ಭೇಟಿಕೊಟ್ಟು ತಮಗೆ ಮತ ನೀಡುವಂತೆ ಮುಸ್ಲಿಂ ಮತದಾರರನ್ನು ವಿನಂತಿಸಿದರು. ಪುರಸಭಾಧ್ಯಕ್ಷ ಮೊಹಮದ್ ಸಾದಿಕ್ ಸಹ ಬೇಗಾನೆಯವರಿಗೆ ಬೆಂಬಲ ಕೊಡಲು ಕೋರಿದರು. ಕಳೆದ ವಾರ ಬೇಗಾನೆ ಇಲ್ಲಿನ ಚರ್ಚಿಗೂ ಭೇಟಿ ಕೊಟ್ಟಿದ್ದರು.

ಶಾರದಾ ಧನ್ವಂತರಿ ಆಸ್ಪತ್ರೆಗೆ ಇಂದಿರಾ ಭೇಟಿ

ಶೃಂಗೇರಿ: ಪ್ರಧಾನಿ ಶ್ರೀಮತಿ ಇಂದಿರಾ ಗಾಂಧಿ ಅವರು ಇಲ್ಲಿನ ಶಾರದಾ ಧನ್ವಂತರಿ ಧರ್ಮಾರ್ಥ ಆಸ್ಪತ್ರೆಗೆ ಡಿ. ೨೮ರಂದು ಅನಿರೀಕ್ಷಿತ ಭೇಟಿ ನೀಡಿದರು.

ಕೇವಲ ಮೂರು ವರ್ಷದ ಅವಧಿಯಲ್ಲಿ ಆಸ್ಪತ್ರೆ ಸಾಧಿಸಿದ ಅಭಿವೃದ್ಧಿಯನ್ನು, ಬಾಡಿ ಸ್ಕ್ಯಾನರ್ ಮತ್ತು ಹೆಮೋ ಡಯಾಲೈಸರ್‌ಗಳಂಥ ಆಧುನಿಕ ಉಪಕರಣಗಳನ್ನು ಹೊಂದಿರುವುದನ್ನು ಮೆಚ್ಚಿದ ಪ್ರಧಾನಿಯವರು ಆಸ್ಪತ್ರೆಯ ಎಲ್ಲ ವಾರ್ಡ್‌ಗಳಿಗೂ ಭೇಟಿ ನೀಡಿ ರೋಗಿಗಳಿಗೆ ಶುಭ ಕೋರಿದರು.

ಸಂಕ್ಷೇಪ ಸುದ್ದಿಗಳು

ಔಷಧ ಭೋಗವಸ್ತುವಲ್ಲ....

"ಔಷಧ ಭೋಗವಸ್ತುವಲ್ಲ. ಔಷಧಗಳ ಮೇಲೆ ತೆರಿಗೆಯೆಂದರೆ ರೋಗಿಗಳ ಮೇಲೆ ತೆರಿಗೆ. ಈ ನಿರ್ಧಾರ ತೆರಿಗೆಯ ಹಿಡಿತದಿಂದ ಗ್ರಾಹಕನಿಗೂ ಮಾರಾಟಗಾರನಿಗೂ ಬಿಡುಗಡೆ ಬೇಕು. ಔಷಧಿಗಳ ಮೇಲಿನ ಮಾರಾಟ ತೆರಿಗೆ ರದ್ದಾಗಬೇಕು" ಎಂದು ಒತ್ತಾಯಿಸಿ ಔಷಧಿ ವ್ಯಾಪಾರಿಗಳು ದೇಶಾದ್ಯಂತ ಜ. ೧ರಿಂದ ೭ರ ವರೆಗೆ ಪ್ರತಿಭಟನಾ ಸಪ್ತಾಹ ನಡೆಸುತ್ತಿದ್ದಾರೆ. ಈ ಪ್ರತಿಭಟನೆಯ ಅಂಗವಾಗಿ ಜ. ೮ರಂದು ದೇಶಾದ್ಯಂತ ಔಷಧಿ ಅಂಗಡಿಗಳು ಒಂದು ದಿನದ ಸಾಂಕೇತಿಕ ಬಂದ್ ಆಚರಿಸುತ್ತವೆ.

ಆರೋಗ್ಯ ತಪಾಸಣೆ ಶಿಬಿರ

ನೆಮ್ಮಾರು: ಇಲ್ಲಿನ ಗ್ರಾಮ ಪಂಚಾಯ್ತಿ, ಶೃಂಗೇರಿಯ ವ್ಯವಸಾಯ ಬ್ಯಾಂಕ್ ಹಾಗೂ ಶಾರದಾ ಧನ್ವಂತರಿ ಆಸ್ಪತ್ರೆಗಳ ಸಂಯುಕ್ತ ಆಶ್ರಯದಲ್ಲಿ ಡಿ. ೨೩ರಂದು ಇಲ್ಲಿ ಉಚಿತ ಆರೋಗ್ಯ ತಪಾಸಣೆ ಶಿಬಿರ ನಡೆಯಿತು. ಇರಾನಿನಲ್ಲಿ ಸೇವೆ ಸಲ್ಲಿಸುತ್ತಿರುವ ಡಾ|| ಸಿ.ಪಿ.ಮಂಜುನಾಥ್ ಹಾಗೂ ಶೃಂಗೇರಿಯ ಹೇರಳೆ ವೈದ್ಯ ದಂಪತಿಗಳು ಶಿಬಿರ ನಡೆಸಿಕೊಟ್ಟರು.

'ಕ್ಲಾಸಿಕ್' ಸ್ಪರ್ಧೆಗಳು

ಶೃಂಗೇರಿ: ಇಲ್ಲಿನ ಕ್ಲಾಸಿಕ್ ಅಸೋಸಿಯೇಶನ್ ಆಶ್ರಯದಲ್ಲಿ ಡಿ. ೨೫ರಂದು ಜಿಲ್ಲಾ ಮಟ್ಟದ ಭಾವಗೀತೆ, ಜನಪದ ಗೀತೆ, ಚಿತ್ರಗೀತೆ ಸ್ಪರ್ಧೆ ನಡೆಯಿತು. ಮೂರು ವಿಭಾಗದಲ್ಲೂ ತಲಾ ೩ ಬಹುಮಾನ ಹಾಗೂ ೩ ಪ್ರೋತ್ಸಾಹಕ ಬಹುಮಾನಗಳಿದ್ದವು. ೭೦ ಮಂದಿ ಸ್ಪರ್ಧಿಗಳು ಭಾಗವಹಿಸಿದ್ದರು. ಸ್ಪರ್ಧೆ (ಜಾತಿಕೆ) ಬಹಳ ಉತ್ತಮ ಮಟ್ಟದ್ದಾಗಿತ್ತು.

ನಾರ್ವೆ ಬಳಿ ಅಪಘಾತ: ಮಗು ಸಾವು

ನಾರ್ವೆ: ಜ. ೧ರ ಸಂಜೆ ೪.೩೦ರ ಹೊತ್ತಿಗೆ ಕಾರಿಗೆ ಸಿಕ್ಕಿ ಚಂದ್ರಾನಾಯಕ್ ಎಂಬವರ ಸುಮಾರು ೪ ವರ್ಷದ ಗಂಡು ಮಗು ತೀವ್ರ ಗಾಯಗೊಂಡು ಕೊಪ್ಪದ ಆಸ್ಪತ್ರೆಗೆ ತಕ್ಷಣ ಸಾಗಿಸಲಾಗಿ ಅಲ್ಲಿ ಕೊನೆಯುಸಿರೆಳೆಯಿತು. ಒಟ್ಟು ನಾಲ್ಕು ಮಕ್ಕಳ ತಂದೆ ಚಂದ್ರಾನಾಯಕ್ ಕೂಲಿ ಕೆಲಸದವರಾಗಿದ್ದು, ಅವರ ಪತ್ನಿ ಈಗ ೨ ತಿಂಗಳ ಹಿಂದೆ ಕೊಪ್ಪ ಆಸ್ಪತ್ರೆಯಲ್ಲಿ ಕುಟುಂಬ ಯೋಜನೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡಿದ್ದರು.

ಕಾಂಗ್ರೆಸ್‌ಗೆ ಕೆಎನ್ವೀ ರಾಜೀನಾಮೆ

ಶೃಂಗೇರಿ: ಈ ಕ್ಷೇತ್ರದ ಮಾಜಿ ಶಾಸಕ, ಜಿಲ್ಲಾ ಬೋರ್ಡ್ ಮತ್ತು ಜಿಲ್ಲಾ ಕಾಂಗ್ರೆಸ್‌ಗಳ ಮಾಜಿ ಅಧ್ಯಕ್ಷ, ಹಾಗೂ ಎಐಸಿಸಿ ಸದಸ್ಯ ಕೆ.ಎನ್.ವೀರಪ್ಪ ಗೌಡ ಡಿ. ೨೮ರಂದು ಕಾಂಗ್ರೆಸ್‌ಗೆ ರಾಜೀನಾಮೆಯನ್ನು ಪಕ್ಷದ ಜಿಲ್ಲಾಧ್ಯಕ್ಷರ ಮೂಲಕ ಸಲ್ಲಿಸಿದ್ದು, ಡಿ. ೩೦ರಿಂದ ಜನತಾ ಪಕ್ಷಕ್ಕಾಗಿ ಕೆಲಸ ಮಾಡುತ್ತಿದ್ದಾರೆಂದು ಹೇಳಲಾಗಿದೆ.

ಲಯನ್ಸ್ ಅಧ್ಯಕ್ಷರ ಭೇಟಿ

ಕೊಪ್ಪ: ಇಲ್ಲಿನ ಲಯನ್ಸ್ ಕ್ಲಬ್ಬಿಗೆ ಲಯನ್ ಜಿಲ್ಲಾ ಗೌರ್ನರ್ ಡಾ|| ಕೆ.ಬಾಬು ಶೆಟ್ಟಿ ಅವರು ಜ. ೩ರಂದು ಅಧಿಕೃತ ಭೇಟಿ ನೀಡಲಿದ್ದಾರೆ

ಓದುಗರ ಪತ್ರಗಳು

"ಯುವ ಮೇಳದ ಸಮೀಕ್ಷೆ ಅಸಮರ್ಪಕ"

ಮಾನ್ಯ ಸಂಪಾದಕರೆ,

ನಿಮ್ಮ ೧೯–೧೨–೮೨ರ ಪತ್ರಿಕೆಯಲ್ಲಿ ಮಾ. ಶೇ. ಗಣಪತಿಯವರಿಂದ "ಕೊಪ್ಪ ತಾಲ್ಲೂಕ್ ಯುವ ಮೇಳ: ಒಂದು ಸಮೀಕ್ಷೆ" ಶಿರೋನಾಮೆಯಡಿ ಬಂದ ವಿಷಯಗಳಲ್ಲಿ ಇನ್ನೂ ಬರೆಯಬಹುದಾದಂತಹ ವಿಷಯಗಳಿದ್ದವು. ಒಬ್ಬ ವಿದ್ಯಾರ್ಥಿನಿ ಭಾಗವಹಿಸಿದ್ದಕ್ಕೆ ತಾ॥ ಅ॥ ಮಂ॥ ಉಪಾಧ್ಯಕ್ಷೆ ಭಾಗವಹಿಸಬಾರದೆಂದು "ಕಾನೂನು" ಓರ್ವರಿಗಾಗಿ ಮಾಡಿದ್ದಲ್ಲ. ಅವರು ಗುತಿಸಿದ್ದು ಓರ್ವರನ್ನಿರಬಹುದಷ್ಟೆ! ಈ ಯುವ ಮೇಳಗಳು ತಾಲ್ಲೂಕಿನ ಯುವಕರಿಗಷ್ಟೇ ಮೀಸಲು. ಬೇರೆ ತಾಲ್ಲೂಕಿನವರಿಗಾಗಲಿ, ಉದ್ಯೋಗದಲ್ಲಿರುವವರಿಗಾಗಲಿ ಯಾ ವಿದ್ಯಾರ್ಥಿಗಳಿಗಾಗಿಯಲ್ಲ. ಇವರುಗಳಿಗೆಲ್ಲಾ ಬೇರೆ ಬೇರೆ ಅವಕಾಶಗಳಿರುತ್ತವೆ ಎಂಬುದನ್ನು ಎಲ್ಲರೂ ಗಮನದಲ್ಲಿಟ್ಟುಕೊಳ್ಳಬೇಕು. ಹಿರೇಗದ್ದೆಯವರು ಸಹಾ ಬೇರೆ ತಾಲ್ಲೂಕಿನವರೊಬ್ಬರನ್ನು, ಅದರಲ್ಲೂ ಉದ್ಯೋಗದಲ್ಲಿದ್ದವರನ್ನು ತರಾಟಿಗೆ ತೆಗೆದುಕೊಂಡು ಆ ಬಗ್ಗೆ ಯುವಜನಾಧಿಕಾರಿಗಳ ಗಮನಕ್ಕೆ ತಂದಿರುವುದು ಕೂಡಾ ಪುನಃ ಪುನಃ ಯುವಮೇಳದಲ್ಲಿ ಭಾಗವಹಿಸುವ ಅರ್ಹತೆ ಪಡೆದವರಿಗೆ ಮಾತ್ರ ಅವಕಾಶ ಎಂದು ಹೇಳುತ್ತಿರುವಾಗ್ಗೆ "ರಾಜಕೀಯ"ವೆಂದು ಪತ್ರಿಕೆಯಲ್ಲಿ ಬರೆಯುವ ಮೊದಲು, ವಿಷಯ ತಿಳಿದು, ಬೇರೆ ಬೇರೆ ವಿದ್ಯಾರ್ಥಿಗಳು ಭಾಗವಹಿಸಿದಾಗ ಗುರುತಿಸಿ, ಖಂಡಿಸಲು ಲೇಖಕರಿಗೆ ಧೈರ್ಯ ಬರಲಿಲ್ಲವೆ?

ಇನ್ನು, ಬಹುಮಾನ ಗಳಿಸಿದರಲ್ಲಿ ವೈಯಕ್ತಿಕವಾಗಿ ಗುರುತಿಸಿದ ಲೇಖಕರ ಸಮೀಕ್ಷೆಯ ಲೇಖನಿಗೆ ಒಟ್ಟು ಬಹುಮಾನಗಳಲ್ಲಿ ಉತ್ತಮ ಪ್ರತಿಭೆ ತೋರಿದ ಯುವಕ ಸಂಘ, ಯುವತಿ ಮಂಡಳಿಗಳ ಹೆಸರು ಬರೆಯದೇ, ಪರಿಚಯಿಸದೆ ತಮ್ಮದೇ "ರಾಜಕೀಯ" ವ್ಯಕ್ತ ಪಡಿಸಿದ್ದು ಅರಿವಾಗುತ್ತಿಲ್ಲವೆ? ಒಮ್ಮೆ ತಮ್ಮ ಲೇಖನವನ್ನು ಓದಿ ಸಮೀಕ್ಷೆ ಸಮಂಜಸವಿದೆಯೆ? ಎಂದು ನೋಡಿದರೆ ಒಳಿತು.

ಪತ್ರಿಕೆಯವರಿಗೊಂದು ಮಾತು: ವ್ಯಕ್ತಿಗಳ ಮೇಲೆ ದೂರು ಯಾ ಹೊಗಳಿಕೆ ಹಾಕುವ ಮುನ್ನ ಆ ವಿಷಯ ಸತ್ಯವೆ? ಸೂಕ್ತವೆ? ಪರಿಶೀಲಿಸಿರಿ.

—**ಹೊಸ್ಮನೆ ರಮೇಶ್**, ಹಿರೇಕೊಡಿಗೆ.

ಆನೆಗುಂದ ಜನತಾ ಮನೆಗಳ ನೀರಿನ ಬವಣೆ

ಮಾನ್ಯರೆ,

ಶೃಂಗೇರಿಯಿಂದ ೨ ಕಿ.ಮೀ.ದೂರದಲ್ಲಿರುವ ಆನೆಗುಂದದ ಸುಮಾರು ೩೫ ಜನತಾ ಮನೆಗಳವರ ನೀರಿನ ಬವಣೆ ಹೇಳತೀರದು. ಆನೆಗುಂದದ ಅಗ್ರಹಾರದ ಮೇಲ್ಭಾಗದಲ್ಲಿ ಒಂದು ಬೋರ್‌ವೆಲ್ ನಿರ್ಮಿಸಿದ್ದಾರೆ. ಜನತಾ ಮನೆಗಳವರು ಒಂದು ಫರ್ಲಾಂಗ್ ಇಳಿದು ಹೋಗಿ ಆ ಬಾವಿಯಿಂದ ನೀರನ್ನು ಜಗ್ಗಿ ನೀರು ಹೊತ್ತು ಉಬ್ಬು ಹತ್ತಿ ಬರಬೇಕು. ಅರ್ಧ ಗಂಟೆ ನೀರನ್ನು ಎತ್ತಿದರೆ ನಂತರ ಮಣ್ಣು ಬೆರೆತ ಕೊಳಕು ನೀರು ಬಾವಿಯಿಂದ ಬರುತ್ತೆ. ಜನತಾ ಮನೆಗಳ ಕೆಳಭಾಗದಲ್ಲಿ ಅಂದರೆ ಶೃಂಗೇರಿ ಕಡೆಗಿರುವ ಬಂಡೆಯ ಪಕ್ಕದಲ್ಲಿ ಒಂದು ಕೆರೆ ಇದೆ. ಅದರ ನೀರು ಕುಡಿಯಲು ಏನೇನೂ ಯೋಗ್ಯವಾಗಿಲ್ಲ. ಅದು ಜಾನುವಾರುಗಳ ಮೈ ತೊಳೆಸಲು ಮತ್ತು ನಿವಾಸಿಗಳ ಶೌಚಕ್ಕೆ ಉಪಯೋಗಿಸಲ್ಪಡುತ್ತಿದೆ.

ಚುನಾವಣಾ ತಂತ್ರವೋ ಏನೋ ಎನ್ನುವಂತೆ, ಈಗ ಎದುರು ಭಾಗದಲ್ಲಿ ಕಾಣುವ ಗದ್ದೆಯ ಹತ್ತಿರ—ಅಂದರೆ ಈ ಮನೆಗಳಿಂದ ಸುಮಾರು ೬೦–೭೦ ಅಡಿ ಕೆಳಭಾಗದಲ್ಲಿ ಒಂದು ಬಾವಿ ಮಂಜೂರಾಗಿದೆಯಂತೆ. ಇದರಿಂದ ನಮಗೆ ಏನೇನೂ ಉಪಯೋಗವಾಗುವುದಿಲ್ಲ. ಆದ್ದರಿಂದ ಈಗಲಾದರೂ ಸಂಬಂಧಪಟ್ಟವರು ಈಕಡೆ ಗಮನ ಹರಿಸಿ ರಸ್ತೆಯ ಪಕ್ಕದಲ್ಲಿ ಎಲ್ಲರಿಗೂ ಅನುಕೂಲವಾಗುವಂತೆ ಒಂದು ಬಾವಿಯನ್ನು ನಿರ್ಮಿಸಿ ಅನುಕೂಲ ಕಲ್ಪಿಸಿ ಕೊಡುತ್ತಾರೆ ಎಂದು ನಂಬಬಹುದೇ?

ನಿವಾಸಿಗಳ ಪರವಾಗಿ,

—**ಎಸ್.ಎನ್.ರಾವ್**, ಆನೆಗುಂದ.

ಮತದಾರರ ಅಭಿಪ್ರಾಯ

ಬಡವರ ಚರ್ಮ ಸುಲಿದು ಗೋರಿ ಕಟ್ಟುವ ಚುನಾವಣೆ

ನೆಲವೇ ಹಾಸಿಗೆ, ಆಕಾಶವೇ ಹೊದಿಕೆಯಾಗಿರುವ ಬಡಜನ ಮಾಗಿಯ ಚಳಿಯಿಂದ ನಡುಗುತ್ತಿರುವಂತೆಯೇ ಚುನಾವಣೆಯ ಕಾವು ಏರ ತೊಡಗಿದೆ. ಎಲ್ಲಿ ನೋಡಿದರೂ ಕಳ್ಳ ರಾಜಕಾರಣಿಗಳ ಸುಳ್ಳು-ಸುಳ್ಳು ಭಾಷಣಗಳು, ಅಬ್ಬರದ ಪ್ರಚಾರ.

ಒಂದು ಹೊತ್ತಿನ ಕೂಳಿಗೆ ಗತಿಯಿಲ್ಲದಿರುವ ಕೋಟ್ಯಾಂತರ ಜನ ಸಾಯುತ್ತಿರುವಾಗ, ಅವರ ಚರ್ಮ ಸುಲಿದು, ಚುನಾವಣೆಗಳನ್ನು ನಡೆಸಿ, ಹಣದ ಹೊಳೆ ಹರಿಸಿ, ಕೆಲವೇ ಜನ ಭ್ರಷ್ಟರು, ದುಷ್ಟರು ಅಧಿಕಾರ ಹಿಡಿದು, ಬಡವರಿಗೆ ಗೋರಿ ಕಟ್ಟುತ್ತಾರೆ. ಚುನಾವಣೆ ಮುಗಿದರೆ ಸಾಕು, ಎಲ್ಲ ವಸ್ತುಗಳ ಬೆಲೆ ಗಗನ ಮುಟ್ಟುತ್ತವೆ. ಆದರೆ ಬಡಜನತೆಯ ಜೀವಕ್ಕೆ ಬೆಲೆಯಿಲ್ಲದಾಗುತ್ತದೆ.

ಇದೆಲ್ಲಾ ಜನರಿಗೆ ಗೊತ್ತಿದ್ದರೂ, ಮತಗಟ್ಟೆಗೆ ಹೋಗುತ್ತಾರೆ, ಮುದ್ರೆ ಒತ್ತಿ ಬಂದು ಸಾಯುತ್ತಾರೆ. ಇದಕ್ಕೆ ಕೊನೆ ಇದೆಯೆ?

—ಈರಲಗೆರೆ ಸಿದ್ಧಯ್ಯ, ಬೆಂಗಳೂರು.

"ಈ ಅಂದರ್ - ಬಾಹರ್‌ನಲ್ಲಿ ನಡೆಯುದ್ದಿದೆಯೆ ?"

ನಮ್ಮ ದೇಶದ ರಾಜಕೀಯ ಆಗುಹೋಗುಗಳು ಚರ್ಚೆಗೆ ಅಷ್ಟೇನೂ ಸುಲಭದ ವಿಚಾರವಲ್ಲ. ನಮ್ಮ ದೇಶದ ಜನ ಅಜ್ಞಾನಿಗಳು, ಅವರಿಂದಲೇನೂ ಆಗದು ಎಂದು ನಿಟ್ಟುಸಿರು ಬಿಡುತ್ತಿದ್ದಂತೆ ಅವರಿಂದಲೇ ಸರ್ಕಾರದ ಬದಲಾವಣೆ. ಅಜ್ಞಾನಿಗಳೆನಿಸಿಕೊಂಡರೂ ಸರ್ಕಾರದ ಪತನದಲ್ಲಿ ಯಶಸ್ವಿಯಾದರು — ಬುದ್ಧಿವಂತರೇ ಅಪ್ರಯೋಜಕರು ಎಂಬ ನಿರ್ಧಾರಕ್ಕೆ ಬರುತ್ತಿದ್ದಂತೆ ಅವರಿಂದಲೂ ಸರ್ಕಾರದ ಪತನ ಸಾಧ್ಯವೆಂಬದನ್ನು ತೋರಿಸಿಕೊಟ್ಟರು! ಹೀಗೆ ಆಡಳಿತ ಪಕ್ಷ ವಿರೋಧ ಪಕ್ಷನಾದದ್ದೂ, ವಿರೋಧ ಪಕ್ಷ ಆಡಳಿತ ಪಕ್ಷ ವಾದದ್ದೂ ನಮ್ಮ ಕಾಲದಲ್ಲೇ.

ಇರುವ ಆರ್ಥಿಕ ಪರಿಸ್ಥಿತಿ, ಅಧಿಕಾರ ಲಾಲಸೆ, ಜಾತಿ ಪದ್ಧತಿ ಸಮಸ್ಯೆಗಳ ಕೆಲವು ಮುಖ್ಯ ಕಾರಣಗಳು. ಇಂದಿನ ಹೋರಾಟ ಮೌಲ್ಯಕ್ಕಿಂತ ಹೆಚ್ಚು ಅಧಿಕಾರಕ್ಕಾಗಿ ನಡೆಯುವುದು ದುರದೃಷ್ಟಕರ. ಅಧಿಕಾರಕ್ಕಾಗಿ ಮೌಲ್ಯಗಳ ತ್ಯಾಗಕ್ಕೆ ಸಿದ್ಧ. (ತ್ಯಾಗ ಮಾಡುವಾಗ ಶ್ರೇಷ್ಠವಾದದ್ದನ್ನೇ ಮಾಡಿದರೆ ಬೆಲೆಯಲ್ಲವೆ?) ಶತ್ರು ಪಾಳೆಯದಲ್ಲಿರುವವನನ್ನು 'ಕಳ್ಳ ಭಟ್ಟಿಯವ, ಕಳ್ಳ ಮರದವ, ಕಳ್ಳ ಕಾಂಟ್ರಾಕ್ಟುದಾರ'ನೆಂದು ಹಳಿಯುತ್ತಾ ಅಂಥವರನ್ನೂ ತಮ್ಮ ಸೇನೆಗೆ ಸೇರಿಸಲು ಶತಪ್ರಯತ್ನ ಮಾಡುವುದೇಕೆ ಮತ್ತು ಅಂಥವರು ಮಿತ್ರರಾದಾಗ ಕಲ್ಲು ಅಹಲ್ಯೆಯಂತೆ ಶಾಪವಿಮುಕ್ತರಾಗುವ ಬಗೆ ಹೇಗೆ? ಚುನಾವಣಾ ಕಾಲದಲ್ಲಿ ಎದ್ದ ಧೂಳಿನಲ್ಲಿ ತಾನು ಯಾರು; ಇನ್ನೊಬ್ಬನಾರು ಎಂದು ತಿಳಿಯುವುದಿಲ್ಲ—ಆ ಧೂಳು ನಿಧಾನವಾಗಿ ನೆಲವನ್ನಾವರಿಸುತ್ತಿದ್ದಂತೆ ಯಾರು ಯಾರು ಎಲ್ಲೆಲ್ಲಿ ಎಂಬುದನ್ನು ಅರಸಬೇಕಾದ್ದು ಚುನಾವಣೆಯ ವೈಶಿಷ್ಟ್ಯ.

ಭ್ರಷ್ಟನೆಂದು ಕರೆಯಿಸಿಕೊಂಡ ಅರಸರನ್ನು ಇಂದು ಕೊಂಡಾಡಬೇಕಾದ್ದು ನಮ್ಮ ದುರ್ದೈವವೇ ಅಥವಾ ಅರಸರದ್ದೆ! ಇದೇ ರಾಜಕಾರಣ. ಬದುಕಿರುವಾಗ ಹೊಗಳುವುದಕ್ಕಿಂತ ನಂತರ ಹೊಗಳುವುದೇ ಹೆಚ್ಚು!

ವಿರೋಧ ಪಕ್ಷದವರಲ್ಲಿ ಅನೇಕರು ಆಡಳಿತ ಪಕ್ಷದಲ್ಲಿದ್ದವರೂ, ಆಡಳಿತ ಸೂತ್ರ ಹಿಡಿದವರೂ ಆಗಿದ್ದಾರೆ; ಹಾಗೆಯೇ ಆಡಳಿತ ಕೈಗೆತ್ತಿಕೊಂಡವರಲ್ಲಿ ವಿರೋಧ ಪಕ್ಷದಲ್ಲಿದ್ದವರೂ ಇದ್ದಾರೆ. ಈ ಪರಿಸ್ಥಿತಿಯಲ್ಲಿ ಯಾರನ್ನು ಯಾರು ಎಂದು ಕರೆಯಬೇಕು? ಈ ಅಂದರ್—ಬಾಹರ್‌ನಲ್ಲಿ ಏನು ಹೇಳಿದರೂ ಸತ್ಯ—ಏನು ಹೇಳಿದರೂ ಸುಳ್ಳು.

ವಿರೋಧ ಪಕ್ಷವೇ ಆಗಲಿ, ಆಡಳಿತ ಪಕ್ಷವೇ ಆಗಲಿ ಅದು ತುಂಬಿರುವುದು ಅನಿವಾರ್ಯವಾಗಿ ರಕ್ತ, ಮಾಂಸದ ಈ ಮನುಷ್ಯರಿಂದಲೇ. ಆದ್ದರಿಂದಲೇ ಈ ಸಮಸ್ಯೆಗಳು ಮತ್ತು ಅಸ್ಪಷ್ಟತೆಗಳು.

ಆದರೂ ನಮ್ಮ ಹೊಣೆಯನ್ನು ತಪ್ಪಿಸಿಕೊಳ್ಳುವಂತಿಲ್ಲ. ಏಕೆಂದರೆ ಇದು 'ಪ್ರಜಾಪ್ರಭುತ್ವ'!

—**ಬಿ.ಎಂ.ರಘುನಾಥ್**, ಹರಿಹರಪುರ.

ಚುನಾವಣೆ: ಮಧ್ಯಮ ವರ್ಗದವನ ಅನಿಸಿಕೆ

೫–೧೨–೮೨ರ 'ಮುಂಜಾವು'ನಲ್ಲಿಯ 'ನಾವೇಕೆ ಮತ ನೀಡಬೇಕು?' ಎಂಬ ಪತ್ರದಲ್ಲಿ, ಮಧ್ಯಮ ವರ್ಗದ ಜನತೆ ಸರ್ಕಾರದ ಸೌಲಭ್ಯಗಳಿಂದ ವಂಚಿತರಾಗಿರುವ ಬಗ್ಗೆ ಬರೆದ ಸತ್ಯ ಸಂಗತಿಗೆ ಇನ್ನೂ ಕೆಲವು ವಿಚಾರಗಳನ್ನು ಸೇರಿಸುತ್ತೇನೆ.

ಮೊದಲನೆಯದಾಗಿ, ಮಧ್ಯಮ ವರ್ಗದ ಜನತೆಯ ಇರುವಿಕೆಯನ್ನು ಈಗಿನ ರಾಜಕಾರಣಿಗಳು ಚುನಾವಣಾ ಕಾಲದಲ್ಲಿ ಮಾತ್ರ ನೆನಪಿಸಿಕೊಳ್ಳುತ್ತಾರೆ. ಅಧಿಕಾರಕ್ಕೆ ಬಂದ ಮೇಲೆ ಈ ವರ್ಗದವರ ಏಳಿಗೆಗೆ ಮಾಡಬೇಕಾದ ಕೆಲಸಗಳನ್ನು ಮಾಡಲು ಇವರಿಗೆ ಸಾಧ್ಯವೇ ಇರುವುದಿಲ್ಲ. ಅದೂ ಅಲ್ಲದೆ ಸರ್ಕಾರವು ಕೆಳದರ್ಜೆಯ ಜನತೆಗೆ, ಸಾಲ, ಸಹಾಯ ಧನ ಸೌಲಭ್ಯಗಳಂತೆ ನಾನಾ ರೀತಿಯ ಯೋಜನೆಗಳನ್ನು ಹಾಕಿ ಆ ವರ್ಗದವರ ಏಳಿಗೆಗೆ ಮಾಡುತ್ತಿರುವ ಕೆಲಸ ಶ್ಲಾಘನೀಯ. ಆದರೆ ಈ ಎಲ್ಲಾ ಸವಲತ್ತುಗಳು ಪರೋಕ್ಷವಾಗಿ ಶ್ರೀಮಂತ ವರ್ಗಕ್ಕೆ ತಲುಪುತ್ತಿರುವ ಉದಾಹರಣೆ ಕೊಡಬೇಕಾಗೇನಿಲ್ಲ. ಇದು ಪ್ರತ್ಯಕ್ಷವಾಗಿ ಅಲ್ಲದಿದ್ದರೂ ಇದರ ಬಿಸಿ ಪರೋಕ್ಷವಾಗಿ ಮಧ್ಯಮ ವರ್ಗದ ಜನತೆಗೆ ತಾಗುತ್ತಿದೆ.

(೩ನೇ ಪುಟಕ್ಕೆ)

ಹೂವುಗಳು

ಹೂವುಗಳು ಸೌಂದರ್ಯದ ಪ್ರತೀಕವೆಂದು
ಅವುಗಳನ್ನು ನೋಡಿ ಆನಂದಿಸುವ ನಿಮಗೆ
ಅವುಗಳ ಕಷ್ಟದ ಬಗ್ಗೆ ತಿಳಿದಿದೆಯೇ?
ಮುಳ್ಳುಗಳ ನಡುವೆ ಅರಳಿದ ಹೂಗಳನ್ನು
ಎದ್ದುನಿಲ್ಲದಂತೆ ತಳ್ಳಿಹಾಕುವುದನ್ನು ಕಂಡು
ಪ್ರತಿಭಟಿಸುವ ಶಕ್ತಿ ಕುಂದುತ್ತದೆ!
ಹೂವಿನ ಚೆಲುವನ್ನು ಹೊಗಳಿ
ಕವನ ಬರೆದ ಕವಿಗೆ, ಅದರ
ಇನ್ನೊಂದು ಮುಖದ ಅರಿವಿದೆಯೇ?
ಕವನ ಓದಿ ಹೂವು ನೋವಿನನಗೆ ಮೂಡಿಸಿದಾಗ
ನೀವೆಷ್ಟು ಆನಂದಿಸುತ್ತೀರೆಂದು ನನಗೆ ತಿಳಿದಿದೆ.
ದಹಿಸುತ್ತಿರುವ ಅದು ಸುಖವಾಗಿ ಬಾಳಬಹುದೇ?
ಸಮಾಜದ ಮಧ್ಯೆ ತಲೆಯೆತ್ತಿನಿಲ್ಲಲಾಗದೆ
ಚಡಪಡಿಸಿ ಕೊನೆಗೆ ಬಾಡುವ ಹೂಗಳ
ಅಸಹಾಯಕತೆಗೆ ಬಹುವಾಗಿ ಮರುಗುತ್ತೇನೆ.

—**ಪುಷ್ಪಲತ ಎಸ್.**
ಮೊದಲ ಬಿ.ಕಾಂ.

ಶೃಂಗೇರಿ ಕ್ಷೇತ್ರದ ಚುನಾವಣೆ ಸಮೀಕ್ಷೆ

ಮಾ.ಶೀ.ಗಣಪತಿ, ಸಿರಿಮನೆ ನಾಗರಾಜ್.

ಬೇಗಾನೆ ಗೆಲ್ಲುವುದು ಸುಲಭವಲ್ಲ....

ಶೃಂಗೇರಿ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಚುನಾವಣಾ ಫಲಿತಾಂಶ ಹೀಗೇ ಆದೀತೆಂದು ಹೇಳಲು ಅಷ್ಟಾಗಿ ಧೈರ್ಯ ಬರದಂತಹ ಪರಿಸ್ಥಿತಿ ಎದ್ದು ಕಾಣುತ್ತಿದೆ. ದಿನದಿನಕ್ಕೂ ಹೊಸಹೊಸ ಬೆಳವಣಿಗೆಗಳು ರೂಪು ಪಡೆಯುತ್ತಿರುವಂತಿದೆ. ಸ್ಪರ್ಧೆ ತೀವ್ರ ಸೆಣಸಾಟದಿಂದ ಕೂಡಿದೆಯೆಂಬುದಂತೂ ನಿರ್ವಿವಾದ. ಆದರೆ ಅಷ್ಟೇ ಅಲ್ಲ, "ಬೇಗಾನೆ ರಾಮಯ್ಯನವರು ಗೆಲ್ಲುವುದೇ ನಿಶ್ಚಯವಿಲ್ಲ" ಎನ್ನುವ ಮಟ್ಟಕ್ಕೂ ವರದಿಗಳು ಹೋಗುತ್ತಿವೆ.

ಶೃಂಗೇರಿ ವಿಧಾನ ಸಭಾ ಕ್ಷೇತ್ರದಲ್ಲಿ ಈಸಲ ಚರಿತ್ರೆ ಸೃಷ್ಟಿಯಾಗಬಹುದೆ? ಕ್ಷೇತ್ರದ ಮೂರೂ ತಾಲ್ಲೂಕುಗಳಲ್ಲಿ ಸುತ್ತಾಡಿ ಹಲವಾರು ಜನರನ್ನು ಮಾತಾಡಿಸಿದಾಗ ಈ ಪ್ರಶ್ನೆ ಏಳುತ್ತದೆ.

ಈ ಸಲದ ವಿಶೇಷವೆಂದರೆ ಕಣದಲ್ಲಿ ನೇರ ಸ್ಪರ್ಧೆಯಿದ್ದು, ಇಬ್ಬರು ಅಭ್ಯರ್ಥಿಗಳೂ ಸಮ ಸಮನಾಗಿ ಜನಪ್ರಿಯತೆ, ಪ್ರಸಿದ್ಧಿ ಅಥವಾ ಪ್ರಭಾವ ಉಳ್ಳವರಾಗಿರುವುದು.

ಕಾಂಗ್ರೆಸ್ (ಐ) ಅಭ್ಯರ್ಥಿಯಾಗಿರುವ ಬೇಗಾನೆ ರಾಮಯ್ಯ ಮಂತ್ರಿಯಾಗಿ, ತಮ್ಮ ಕ್ಷೇತ್ರದಲ್ಲಿ ಸರ್ಕಾರದ ಹತ್ತಾರು ಯೋಜನೆಗಳ ಅನುಷ್ಠಾನಕ್ಕೆ ಅಡಿಪಾಯ ಹಾಕಿದವರು. ಅದಕ್ಕಿಂತ ಹೆಚ್ಚಾಗಿ, ಬಡಬಗ್ಗರಲ್ಲಿ ಇನ್ನೂ ಸಾಕಷ್ಟು ಪ್ರೀತಿ ವಿಶ್ವಾಸ ಉಳಿಸಿಕೊಂಡಿರುವ ಇಂದಿರಾ ಗಾಂಧಿಯವರ ಆಶೀರ್ವಾದವುಳ್ಳವರು. ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಕ್ಷೇತ್ರದ ಯಾವುದೇ ಹಳ್ಳಿಗಾಗಲಿ ಹೋಗುವ ಅವಕಾಶ ಕಳೆದುಕೊಳ್ಳದೆ, ಹೋದಲ್ಲೆಲ್ಲ ತಮ್ಮ ವರ್ಚಸ್ಸು ಬೆಳೆಸಲು, ಜನರ ಮೇಲೆ ತಮ್ಮ ಪ್ರಭಾವ ಬೀರಲು ಪ್ರಯತ್ನಪಟ್ಟವರು. "ಮೂವತ್ತು ವರ್ಷಗಳಿಂದ ಏನೂ ಆಗಿರದಿದ್ದ ಈ ಕ್ಷೇತ್ರದಲ್ಲಿ ನಾನು ಮಂತ್ರಿಯಾಗಿ ಕೇವಲ ಎರಡೇ ವರ್ಷದಲ್ಲಿ, ನೋಡಿ, ಇಂಥಿಂಥ ಕೆಲಸ ಮಾಡಿದ್ದೇನೆ" ಎಂದು ಪಟ್ಟಿ ಮಾಡಬಲ್ಲಷ್ಟು ಸಾಧನೆಗಳನ್ನು ಹೊಂದಿದವರು.

ಗೋವಿಂದಗೌಡರಾದರೂ ಹಿಂದೆ ಕೊಪ್ಪ ಪುರಸಭಾ ಅಧ್ಯಕ್ಷರಾಗಿ, ಕೊಪ್ಪ ತಾ|ಅಭಿ|ಮಂ| ಅಧ್ಯಕ್ಷರಾಗಿ ಸಾಕಷ್ಟು ಹೆಸರು ಸಂಪಾದಿಸಿದವರು. ಈಗ ಶೃಂಗೇರಿ ತಾಲ್ಲೂಕಿನಲ್ಲಿರುವ ಕಿಗ್ಗ ಹೋಬಳಿ ಹಿಂದೆ ಕೊಪ್ಪ ತಾ||ನಲ್ಲಿದ್ದಾಗ ಆ ಭಾಗದಲ್ಲೆಲ್ಲ ಓಡಾಡಿ "ಕೆಲಸ ಮಾಡಿಕೊಟ್ಟವರು." [ಶೃಂಗೇರಿಯ ಗೆಳೆಯರೊಬ್ಬರು ಹಲವಾರು ಮಂದಿ [illegible] ಜನರನ್ನು ವಿಚಾರಿಸಿದಾಗ, ಹಳೆಯ ಪೀಳಿಗೆಯವರೆಲ್ಲ, "ಗೋವಿಂದ ಗೌಡರು ಆಗೆಲ್ಲ **ಕೊಪ್ಪದಿಂದ ಬಂದು** ನಮ್ಮ ಕೆಲಸ ಮಾಡಿಕೊಟ್ಟಿದ್ದಾರೆ. ಈ ಸಲ ನಮ್ಮದೂ ಒಂದು ಓಟು ಅವರಿಗೇ" ಎಂದು ಗೌಡರನ್ನು ಜ್ಞಾಪಕ ಇಟ್ಟಿದ್ದಾರಂತೆ.] ಸಾಲದ್ದಕ್ಕೆ ಈ ಎರಡು ವರ್ಷಗಳಲ್ಲಿ ತಾ|| ರೈತ ಸಂಘದ ಅಧ್ಯಕ್ಷರಾಗಿ, ರೈತ ಚಳುವಳಿಯ ಪ್ರಭಾವಕ್ಕೊಳಗಾದವರ ನಡುವೆ ಹೊಸದಾಗಿ ಹೆಸರು ಮಾಡಿದವರು.

ಮುಖಂಡರುಗಳ ವಿಶ್ವಾಸ

ಹೀಗೆ ಹೆಚ್ಚೂ ಕಮ್ಮಿ ಸಮಬಲರಾದ ಇಬ್ಬರೇ ಅಭ್ಯರ್ಥಿಗಳಿದ್ದು (ಇನ್ನಿಬ್ಬರು ಪಕ್ಷೇತರರ ಸ್ಪರ್ಧೆ "ಆಟಕ್ಕುಂಟು, ಲೆಕ್ಕಕ್ಕಿಲ್ಲ"!), ಮತಗಳು ಬೇರೆ ಬೇರೆ ಕಡೆ ಹಂಚಿ ಹೋಗದಿರುವ ಈ ಸಂದರ್ಭದಲ್ಲಿ ಎರಡೂ ಕಡೆಗಳ ಮುಖಂಡರು ಏನು ಹೇಳುತ್ತಾರೆಂದು ವಿಚಾರಿಸುತ್ತಾ ಹೋದೆವು. ಕಾಂಗ್ರೆಸ್ (ಐ)ನವರು ತಾವು ಗೆಲ್ಲುತ್ತೇವೆಂದು ಸ್ಪಷ್ಟವಾಗಿ ಹೇಳಿದರೆ, ಜನತಾದವರು "ನಾಳೆಯೇ ಚುನಾವಣೆ ನಡೆದರೆ ನಾವು ೧೦ ಸಾವಿರ ಅಂತರದಲ್ಲಿ ಗೆಲ್ಲುತ್ತೇವೆ" ಎನ್ನುತ್ತಾರೆ. ಅಂದರೆ ಕೊನೇ ಗಳಿಗೆಯಲ್ಲಿ ಏನಾದೀತೋ ಎಂಬುದು ಅವರಿಗೆ ಅಸ್ಪಷ್ಟತೆಯಿರಬೇಕು.

'ಓಟು ಬ್ಯಾಂಕು'ಗಳ ಮನಃಸ್ಥಿತಿ ಹೇಗಿದೆ?

ಈ ಕ್ಷೇತ್ರದಲ್ಲಿ ಮುಖ್ಯವಾಗಿ ನಾಲ್ಕು 'ಓಟು ಬ್ಯಾಂಕು'ಗಳಿವೆ — ಒಕ್ಕಲಿಗರು, ಮುಸ್ಲಿಮರು, ಹರಿಜನ–ಗಿರಿಜನ – ಕಾಫಿ ತೋಟದ ಕೂಲಿಗಾರ ಮತ್ತಿತರ ದುರ್ಬಲ ವರ್ಗದವರು ಹಾಗೂ ಬ್ರಾಹ್ಮಣರು. ಈವರೆಗಿನ ಚುನಾವಣೆಗಳಲ್ಲಿ ಇದರಲ್ಲಿ ಮೊದಲ ಮೂರು ಬ್ಯಾಂಕುಗಳು ಸಾಮಾನ್ಯವಾಗಿ ಇಡಿ ಇಡಿಯಾಗಿ ಕಾಂಗ್ರೆಸಿಗೆ ದಕ್ಕುತ್ತಿದ್ದವು. ಬ್ರಾಹ್ಮಣರ ಓಟು ಸಾಮಾನ್ಯವಾಗಿ ಜನಸಂಘ (ಈಗಿನ ಭಾಜಪಾ)ಕ್ಕೆ ಮೀಸಲಿರುತ್ತಿದ್ದವು. ಆದರೆ ಈ ಬಾರಿ ಈ ನಾಲ್ಕೂ ಬ್ಯಾಂಕುಗಳು ಒಡೆಯುವ ಸ್ಪಷ್ಟ ಲಕ್ಷಣವಿದೆ.

೧) ಇಬ್ಬರು ಅಭ್ಯರ್ಥಿಗಳೂ ಒಕ್ಕಲಿಗರಾದ್ದರಿಂದ, ಖಾಸಾ ಸಂಬಂಧಿಗಳಾದ್ದರಿಂದ ಒಕ್ಕಲಿಗರ ಮತಗಳು ಜಾತಿ ಆಧಾರ ಹೊಂದುವ ಸಂಭವ ಕಡಿಮೆ. ಅಲ್ಲದೆ, ಹಿಂದಿನಿಂದಲೂ ಕಾಂಗ್ರೆಸಿಗೆ ಬೆಂಬಲ ಕೊಡುತ್ತ ಬಂದಿರುವ ಈ ಜನಾಂಗದ ಯುವ ಪೀಳಿಗೆ ಇವತ್ತು ಅಪ್ಪನೆಟ್ಟ ಆಲದ ಮರಕ್ಕೆ ನೇಣು ಹಾಕಿಕೊಂಡು ಕುಳಿತಿಲ್ಲ. ನಿರುದ್ಯೋಗ, ವಿದ್ಯಾವಂತಿಕೆಯ ಮೂಲಕ ಹೊಸ ವಿಚಾರಗಳು, ದಿನದಿನ ನಷ್ಟದ ಕಡೆ ವಾಲುತ್ತಿರುವ ಬೇಸಾಯ, ರೈತ ಚಳುವಳಿ–ಮುಂತಾದ ಹಲವು ಕಾರಣಗಳು ಈ ಯುವ ಪೀಳಿಗೆಯ ಸಾಕಷ್ಟು ಭಾಗವನ್ನು ಕಾಂಗ್ರೆಸ್ಸಿನಿಂದ ಬೇರ್ಪಡಿಸಿವೆ.

೨) ಮುಸ್ಲಿಮರ ಓಟು ಈವರೆಗೂ ಕಾಂಗ್ರೆಸಿಗೆ ಕಟ್ಟಿಟ್ಟ ಬುತ್ತಿಯಾಗಿರುತ್ತಿತ್ತು. ಆದರೆ ಈ ಬಾರಿ ಇಡೀ ರಾಜ್ಯದಲ್ಲಿ ಮುಸ್ಲಿಮರಿಗೆ ಅಸಮಾಧಾನವಿದೆ ಎನ್ನಲಾಗಿದೆ. ಈ ಕ್ಷೇತ್ರದಲ್ಲೂ ಸಹ ಅವರ ಅಸಮಾಧಾನಕ್ಕೆ ಕಾರಣಗಳಿವೆ ಎನ್ನಲಾಗಿದೆ. ರಾಜ್ಯದ ಹಲವೆಡೆ ಅವರ ಅಭ್ಯರ್ಥಿಗಳು ಕಾಂಗ್ರೆಸಿಗೆ ಬಂಡಾಯ ಹೂಡಿ ಸ್ವತಂತ್ರವಾಗಿ ಸ್ಪರ್ಧಿಸಿದ್ದಾರೆ. ಚಿಕ್ಕಮಗಳೂರು ಕ್ಷೇತ್ರದ ಅವರ ಅಭ್ಯರ್ಥಿಯನ್ನು ಕಣದಿಂದ ಹಿಮ್ಮೆಟ್ಟಿಸಲು ನಡೆದ ಹಲವು ಸನ್ನಿವೇಶ - ಸಂಧಾನಗಳು ಈ ವರದಿ ಬರೆಯುವವರೆಗೂ ವಿಫಲವಾಗಿದ್ದವು.

(೪ನೇ ಪುಟಕ್ಕೆ)

ಮತದಾರರ ಅಭಿಪ್ರಾಯ

(೩ನೇ ಪುಟದಿಂದ)

ಉದ್ಯೋಗ ವಿಷಯದಲ್ಲಿಯೂ ಹಾಗೆ ಬೇರೆ ಶ್ರೀಮಂತ ವರ್ಗದವರು ತಮಗೆ ಬೇಕಾದ ಉದ್ಯೋಗಗಳನ್ನು ಕೊಂಡುಕೊಳ್ಳುತ್ತಿದ್ದಾರೆ. ಕೆಳಜಾತಿಯವರಿಗೆ ಕೆಲವು ಉದ್ಯೋಗಗಳನ್ನು ಸರ್ಕಾರವೇ ಮೀಸಲಾಗಿಟ್ಟಿದೆ. ಆದರೆ ಈ ಮಧ್ಯಮ ವರ್ಗದವರಿಗೆ ಯೋಗ್ಯತೆ ಇದ್ದರೂ ಸಹ ಅವರಿಗೆ ಉದ್ಯೋಗ ದೊರೆಯುವುದು ಕನಸಿನ ಮಾತೇ ಸರಿ.

ಮಧ್ಯಮ ವರ್ಗದ ಜನತೆಗೆ ಸರ್ಕಾರ ಏನೇನು ಮಾಡಿದೆ? ಎಂಬುದನ್ನು ಜನರಿಗೆ ಮನದಟ್ಟು ಮಾಡಿ. ಚುನಾವಣಾ ಕಣದಲ್ಲಿರುವ ರಾಜಕಾರಣಿಗಳು ಅವರ ಮತವನ್ನು ಯಾಚಿಸಲಿ.

ಈ ಬಗ್ಗೆ ಮಧ್ಯಮ ವರ್ಗದ ಜನತೆ ಎಚ್ಚೆತ್ತುಕೊಂಡು ಮತದಾನವನ್ನು ಬಹಿಷ್ಕರಿಸಿ, ಈಗಿನ ರಾಜಕಾರಣಿಗಳಿಗೆ ಸ್ವಲ್ಪವಾದರೂ ಬುದ್ಧಿ ಬರುವಂತೆ ಮಾಡಿದಲ್ಲಿ ಮಧ್ಯಮ ವರ್ಗದವರ ಏಳಿಗೆಗೆ ಸಹಾಯಕವಾದೀತು ಎಂದು ನನ್ನ ಅನಿಸಿಕೆ.

—ಶೇಖರ್, ಚಿಕ್ಕಮಗಳೂರು.

(ಡಿ. ೨೮ರಂದು ಪ್ರಧಾನಿ ಇಂದಿರಾ ಅವರು ಶೃಂಗೇರಿಗೆ ಭೇಟಿ ಕೊಟ್ಟ ಸಂದರ್ಭದ ಹಲವು ಮಸಾಲೆ ಸಂಗತಿಗಳು)

ಒಗ್ಗರಣೆ

§ ಇಂದಿರಾ ಗಾಂಧಿ ಬರುವುದಕ್ಕೆ ಪೂರ್ವಭಾವಿಯಾಗಿ ಬೆಳಿಗ್ಗೆ ೧೧-೩೦ರ ಹೊತ್ತಿಗೆ ಕೆಲವು ಸೂಟ್‌ಕೇಸುಗಳು ಹಾಗೂ ವಿಮಾನ ಪಡೆಯ ಸಿಬ್ಬಂದಿಯೊಂದಿಗೆ ಹೆಲಿಕಾಪ್ಟರೊಂದು ಬಂದಿಳಿಯಿತು. ಅದು ಆಕಾಶದಲ್ಲಿ ಬರುತ್ತಿದ್ದಂತೆ ಒಂದು ಜನ ಗಾಂಧಿ ಮೈದಾನಕ್ಕೆ ಓಡಿದರು ನೋಡಿ! ಕೇವಲ ಐದೇ ನಿಮಿಷದಲ್ಲಿ ಪೇಟೆಯ ಮೂಲೆ ಮೂಲೆಯಿಂದಲ್ಲೆ ಒಂದೆರಡು ಸಾವಿರ ಜನ ಜಮಾಯಿಸಿಬಿಟ್ಟರು.

§ ಮೊದಲಿಗೆ ಹೆಲಿಕಾಪ್ಟರನ್ನು ಕಾಲೇಜು ಮೈದಾನದಲ್ಲಿ ಇಳಿಸುವುದು, ನಂತರ ಪ್ರಧಾನಿಯವರನ್ನು ಮೆರವಣಿಗೆಯಲ್ಲಿ ಗಾಂಧಿ ಮೈದಾನದ ವೇದಿಕೆಗೆ ಕರೆತಂದು ಸಭೆ ನಡೆಸುವುದು ಎಂದು ಆಲೋಚಿಸಲಾಗಿತ್ತಂತೆ. ಆದರೆ ಜನ ಹೆಲಿಕಾಪ್ಟರನ್ನು ಬಿಟ್ಟು [illegible] ಎಂದು [illegible]ರಿಂದ ಗಾಂಧಿ ಮೈದಾನದಲ್ಲೇ ಹೆಲಿಪ್ಯಾಡ್ ನಿರ್ಮಿಸಲಾಯಿತಂತೆ.

§ ಹೆಲಿಕಾಪ್ಟರನ್ನು ನೋಡಲೆಂದೇ ಹತ್ತಾರು ಮೈಲಿ ದೂರದಿಂದ ಬಂದ ಜನ ಮುಂದಿನ ಸಾಲಿನ ಬೇಲಿಗಿಂತಲೂ ಮುಂದೆ ಹೋಗಲು ನುಗ್ಗುತ್ತಿದ್ದರು. ಪೋಲಿಸರು ತಡೆದು ಅಲ್ಲೇ ನಿಲ್ಲಲು ಹೇಳಿದರೆ. "ಇಲ್ಲಿಗೆ 'ಅದು' ಕಾಣುತ್ತಾ?" ಎನ್ನುತ್ತಿದ್ದರು. "ಓಹೋ, ಕಾಣುತ್ತೆ. ನೋಡಿ ಹಾಗೆ ಬಂದು ಹೀಗೆ ಇಳಿದು, ಓ ಅಲ್ಲಿ ನಿಲ್ಲುತ್ತೆ. ಕಾಣುತ್ತೆ ತಾನೆ?" ಎಂದು ಪೋಲಿಸರು ತೋರಿಸಿದ ಮೇಲೆ ಅವರಿಗೆ ಸಮಾಧಾನ.

§ ಇಂದಿರಾ ಗಾಂಧಿಯವರು ಹೆಲಿಕಾಪ್ಟರಿಂದ ಇಳಿದು ವೇದಿಕೆಗೆ ಬರುವಾಗ ಇಬ್ಬರು ಯುವಕರು ಅವರಿಗೆ ತೀರ ಹತ್ತಿರವಾಗಿ ಲಗುಬಗೆಯಿಂದ ನಡೆದು ಬರುತ್ತಿದ್ದರು. ಒಂದು ತಾ||ನ ಕಾಂಗ್ರೆಸ್ ಕಾರ್ಯದರ್ಶಿ, ಇನ್ನೊಂದು ತಾ||ನ ಕಾಂಗ್ರೆಸ್ ಅಧ್ಯಕ್ಷರವರು. ಮುಂದೆ, ಛಾಯಾ ಗ್ರಾಹಕ ಕ್ಯಾಮರಾ ಹೊಂದಿಸುತ್ತ ಒಮ್ಮುಖವಾಗಿ ಹೋಗುತ್ತಿದ್ದ. ಇನ್ನೇನು 'ಕ್ಲಿಕ್'! ಅಯ್ಯೋ, ಅಷ್ಟರಲ್ಲಿ ಒಂದು ಪೋಲಿಸು ತೋಳು ಅಡ್ಡ ಬರಬೇಕೇ? ವೇದಿಕೆಯ ಮೆಟ್ಟಿಲ ಬುಡಕ್ಕೆ ಬಂದಾಗಿತ್ತು. ಕ್ಯಾಮರಾ ಈಗ 'ಕ್ಲಿಕ್' ಅಂದಿತು. ಇನ್ನೆರಡು ಹೆಜ್ಜೆ ಹೋದರೆ [illegible]ದ್ದರೆ?

§ ಶೃಂಗೇರಿ ಮಠದಲ್ಲಿ ಈ ಸರ್ವ [illegible]ತ್ರಿಯಲ್ಲಿ ಗುರುಗಳಿರಲಿಲ್ಲ. ಹಾಗಾಗಿ ಹೊರಭಾಗಕ್ಕೆಲ್ಲ ಸುಣ್ಣ ಬಣ್ಣವಿಲ್ಲ. ಆದರೆ ಈಗ ತರಾತುರಿಯಲ್ಲಿ [illegible] ಲಾಯಿತು. ಈ ಬಗ್ಗೆ [illegible] ಜನ ಮಾತಾಡಿಕೊಂಡರು.

§ ಗುರುಗಳೀಗ ಜಬ್ಬಲ್‌ಪುರದಲ್ಲಿ ಮೊಕ್ಕಾಂ ಮಾಡಿದ್ದಾರೆ. ಅಲ್ಲಿಂದ ವಿಶೇಷ ವಿಮಾನವೊಂದರಲ್ಲಿ ಬೆಂಗಳೂರಿಗೆ ಬಂದು, ಹೆಲಿಕಾಪ್ಟರಲ್ಲಿ ಶೃಂಗೇರಿಗೆ ಬಂದು ಶ್ರೀ. ಶ್ರೀ. ಇಂದಿರಾ ಗಾಂಧಿ ಬಂದ ದಿನ ಅವರಿಗೆ ದರ್ಶನ ಕೊಟ್ಟು ಮರು ದಿನ ಪುನಃ ಹಿಂದಕ್ಕೆ ಅದೇ ರೀತಿ ಹೋಗುವುದು ಎಂದು ವ್ಯವಸ್ಥೆ [illegible] ಗುರುಗಳು ಬೇಡ ಎಂದರಂತೆ. ಹಾಗಾಗಿ, ಪ್ರಧಾನಿಗಳು ಜಬ್ಬಲ್‌ಪುರಕ್ಕೇ ಹೋಗಿ ಗುರುಗಳನ್ನು ನೋಡಿ ಶೃಂಗೇರಿಗೆ ಬಂದರಂತೆ.

§ ಯಾವಾಗಲೂ ತಡವರಿಸದೆ ನಿರರ್ಗಳವಾಗಿ ಮಾತಾಡುವ ಪ್ರಧಾನಿ ಇಲ್ಲಿ ಮಾತಾಡುವಾಗ ಮೂರುನಾಲ್ಕು ಸಲ 'ಅಂ'... 'ಅಂ...' ಎನ್ನುತ್ತಾ ಪದಗಳಿಗಾಗಿ ಹುಡುಕಾಡಿದರು. ಎಂದಿನ ಲವಲವಿಕೆ ಮುಖದಲ್ಲಿ ಗೆಲುವಿರಲಿಲ್ಲ. ಕೇವಲ ದೇಶದ ವಿಷಯ ಮಾತ್ರ ಮಾತಾಡಿದರು. ವಿರೋಧ ಪಕ್ಷಗಳನ್ನು ಬಯ್ಯಲಿಲ್ಲ.

ಕಾಂಗ್ರೆಸ್ (ಐ) ಈ ಚುನಾವಣೆಯಲ್ಲಿ ಸೋಲಿನ ಸೂಚನೆ ಕಂಡಿದೆಯೆ? ಎಂದು ಹಲವರಿಗೆ ಅನುಮಾನ.

§ ಶ್ರೀಮತಿ ಗಾಂಧಿ ತಮ್ಮ ಭಾಷಣದ ಕೊನೆಯಲ್ಲಿ ಕನ್ನಡದಲ್ಲಿ "ಎಲ್ಲರಿಗೂ ನಮಸ್ಕಾರ" ಎನ್ನಲು ಹೋಗಿ "ಎಲ್ಲಿದೆನೂ ಮುಸ್ಕಾರ" ಎಂದರು.

ಬೇಗಾನೆ ಗೆಲ್ಲುವುದು ಸುಲಭವಲ್ಲ....

(೩ನೇ ಪುಟದಿಂದ)

ಆದ್ದರಿಂದ ಈ ಬಾರಿ ಈ ಬಗ್ಗೆ ಕಾಂಗ್ರೆಸಿಗೆ ಸ್ವಲ್ಪ ತೀವ್ರವಾದ ಆತಂಕವೇ ಇದೆ. ಬೇಗಾನೆ ರಾಮಯ್ಯ ಮೂರು ಶುಕ್ರವಾರಗಳಂದು ಶೃಂಗೇರಿ, ಕೊಪ್ಪ, ನ.ರಾ.ಪುರಗಳ ಮಸೀದಿಗಳಿಗೆ ಪ್ರಾರ್ಥನೆಯ ವೇಳೆ ಭೇಟಿ ಕೊಟ್ಟಿದ್ದರು. ಕೊಪ್ಪದ ವರದಿಗಳ ಪ್ರಕಾರ ಅಲ್ಲಿನ ಮಸೀದಿ ಭೇಟಿ ನಿರೀಕ್ಷಿತ ಫಲ ನೀಡಿಲ್ಲವಂತೆ. ಅಸಮಾಧಾನ ಸ್ಪಷ್ಟವಾಗಿಯೇ ವ್ಯಕ್ತಪಟ್ಟಿತಂತೆ.

ಆದರೆ, ನ.ರಾ.ಪುರದ ತಾ|| ಕಾಂಗ್ರೆಸ್ ಅಧ್ಯಕ್ಷ ಅಬ್ದುಸ್ ಸಮದ್ ಮತ್ತು ಅವರ ಬೆಂಬಲಿಗರು ಮಾತ್ರ ಆತ್ಮ ವಿಶ್ವಾಸ ವ್ಯಕ್ತಪಡಿಸಿದರು. "ನಮ್ಮ ತಾಲ್ಲೂಕಿನ ಒಂದೇ ಒಂದು ಮುಸ್ಲಿಂ ಓಟೂ ಬೇರೆ ಹೋಗುವುದಿಲ್ಲ" ಎಂದು ಅವರು ಹೇಳಿದರು. ಕೊಪ್ಪದಲ್ಲೂ ಸಹ ಮೊಹಮದ್ ಸಾದಿಕ್, ಇಕ್ಬಾಲ್ ಮುಂತಾದ ಮುಖಂಡರು ಕಾಂಗ್ರೆಸಿನ ಜೊತೆಗೇ ಇದ್ದಾರೆ. ಶೃಂಗೇರಿಯ ಬಗ್ಗೆ ಮಾತ್ರ ಖಾತ್ರಿಯಾಗಿ ಹೇಳಲು ಬರುವಂತಿಲ್ಲ.

ಕಾರ್ಮಿಕರು, ದುರ್ಬಲ ವರ್ಗ

೩) ದಲಿತ–ದುರ್ಬಲ ವರ್ಗಗಳು, ಕಾರ್ಮಿಕರು ಇವರ ನಡುವೆ ಈ ಬಾರಿ ಹೊಸ ಬೆಳಕು, ಶಾಖ ಹರಿದಾಡಿರುವ ಲಕ್ಷಣಗಳು ಕಾಣುತ್ತಿವೆ. ಎಸ್ಟೇಟೊಂದರ ರೈಟರೊಬ್ಬರ ಪ್ರಕಾರ "ನಾವು ಯಾರಾದರೂ ಕೇಳಿದರೆ ಎದುರಿಗೆ, 'ಕಾಂಗ್ರೆಸ್ಸೇ ಗೆಲ್ಲುತ್ತೆ' ಎನ್ನುತ್ತೇವೆ. ಆದರೆ ಈ ಬಾರಿ ಅಷ್ಟು ಸುಲಭ ಇಲ್ಲ...." ಬಸರೀಕಟ್ಟೆಯ ಸುತ್ತ ಮುತ್ತ ಕೆಲವು ಎಸ್ಟೇಟ್–ಊರುಗಳ ಕಾರ್ಮಿಕರು ಕಾಂಗ್ರೆಸ್ಸಿನವರಿಗೆ ಬರಲಿಕ್ಕೇ ಬಿಟ್ಟಿಲ್ಲವೆಂಬ ಸುದ್ದಿಗಳಿವೆ. (ಆದರೆ ಇದೆಲ್ಲ ವಿರೋಧ ಪಕ್ಷದವರ ಕಿತಾಪತಿ ಎಂದೇ ಕಾಂಗ್ರೆಸ್ಸಿನವರು ಹೇಳುತ್ತಾರೆ.) ಬಾಳೆಹೊನ್ನೂರಿಗೆ ಗೋವಿಂದ ಗೌಡರು ಹೋಗಿದ್ದಾಗ ಎಸ್ಟೇಟ್ ಕಾರ್ಮಿಕರು ಬಂದು, 'ಸ್ವಾಮಿ, ನಾವು ನಿಮಗೇ ಓಟು ಕೊಡೋದು' ಎಂದು ಅವರ ಕಾಲು ಹಿಡಿದರೆಂದು ವಿರೋಧ ಪಕ್ಷದ ಕಾರ್ಯಕರ್ತರೊಬ್ಬರು 'ಹೀಗೆಂದರೆ ಯಾರೂ ನಂಬಲಿಕ್ಕಿಲ್ಲ' ಎನ್ನುತ್ತಾ ಹೇಳಿದರು.

ಆದರೆ ಬಾಳೆಹೊನ್ನೂರಿನ ಕೆ.ಟಿ.ಚಿನ್ನಯ್ಯ ಗೌಡರ ಪ್ರಕಾರ ಈ ವರ್ಗಗಳ ಮತದಾರರು ಎಂದಿನಂತೆ ಇಂದು ಹೆಚ್ಚು ತೃಪ್ತರಾಗಿದ್ದು, ಕಾಂಗ್ರೆಸ್ಸಿಗೇ ಮತ ನೀಡುತ್ತಾರೆ.

"ಹಲವು–ಹತ್ತು ಯೋಜನೆಗಳಲ್ಲಿ ಹರಿಜನರಿಗೆ ಬೇಕಾದಷ್ಟು ಸವಲತ್ತುಗಳನ್ನು ಕಾಂಗ್ರೆಸ್ ಸರ್ಕಾರ ಒದಗಿಸಿದೆ. ಗಿರಿಜನರಿಗಂತೂ, ಇದ್ದಷ್ಟು ಕುಟುಂಬಗಳಿಗೆ ಕೊಡಬಹುದಾದ ಎಲ್ಲಾ ಸೌಲಭ್ಯ ಕೊಟ್ಟಿದ್ದು, ಇನ್ನು ಸೌಲಭ್ಯ ಇದೆ–ಆದರೆ ಕುಟುಂಬಗಳೇ ಇಲ್ಲ ಎಂಬಂಥ ಪರಿಸ್ಥಿತಿಯಿದೆ. ತೋಟ ಕಾರ್ಮಿಕರಿಗೆ ಈಗಿನಷ್ಟೇ ಅಲ್ಲ ರೂ. ೫ಂ ಪೈಸೆ ಕನಿಷ್ಠ ಕೂಲಿ ಎಂದು ಒಪ್ಪಂದ ಮಾಡಿರುವುದಲ್ಲದೆ, ಒಂದು ವರ್ಷದ ಬಾಕಿ ಸಹ ಕೊಡುವಂತೆ ಮಾಡಿದ್ದೇವೆ. ಒಬ್ಬೊಬ್ಬರಿಗೂ ಕನಿಷ್ಠ ೩೦೦–೩೫೦ ರೂ. ಸಿಗುತ್ತೆ. ಅವರ ಬೆಂಬಲ ನಮಗೆ ತಪ್ಪಲು ಕಾರಣವೇ ಇಲ್ಲ." ಎನ್ನುತ್ತಾರೆ ಚಿನ್ನಯ್ಯಗೌಡ.

ಅಡ್ಡಗದ್ದೆ, ಹೊಸಕೊಪ್ಪ ಮುಂತಾದ ಕಡೆ ಕೆಲವು ಹರಿಜನರನ್ನು ವಿಚಾರಿಸಿದಾಗ, "ಬೇಗಾನೆ ಗೆದ್ದರೆ ಮಂತ್ರಿಯಾದರೂ ಆಗುತ್ತಾರೆ. ಗೋವಿಂದ ಗೌಡರು ಗೆದ್ದರೆ ಮಂತ್ರಿಯಾಗುವುದಿಲ್ಲ. ಆದ್ದರಿಂದ ನಮ್ಮ ಓಟು ಕಾಂಗ್ರೆಸ್ಸಿಗೇ" ಎಂದರು.

ಕರ್ನಾಟಕ ದಲಿತ ಸಂಘರ್ಷ ಸಮಿತಿ ಚುನಾವಣೆ ಬಹಿಷ್ಕರಿಸುವಂತೆ ಬಹಿರಂಗವಾಗಿ ಕರೆಕೊಟ್ಟಿದೆ. ಶೃಂಗೇರಿ, ಕೊಪ್ಪ ತಾಲ್ಲೂಕುಗಳಲ್ಲೂ ಶಾಖೆಗಳಿವೆಯಾದರೂ ಇನ್ನೂ ಸಾಕಷ್ಟು ಪ್ರಭಾವ ಗಳಿಸದೇ ಇರುವುದರಿಂದ ಬಹಿಷ್ಕಾರಕ್ಕಾಗಿ ಕೆಲಸ ಮಾಡುವ ಸಾಧ್ಯತೆ ಕಡಿಮೆ. ದಲಿತರಲ್ಲಿ ಯುವ ಪೀಳಿಗೆಯವರ ಹೊರತಾಗಿ ಉಳಿದವರು ಓಟು ಹಾಕುವುದೆಂದರೆ ತಮಗೆ ಎಂಥದೋ ಒಂದು ಮರ್ಯಾದೆ. ಓಟು ಮಾಡದೇ ಇರಲು ಆಗುವುದಿಲ್ಲ ಎನ್ನುತ್ತಾರಂತೆ. ಆದರೂ ಅವರಲ್ಲಿ ಎಲ್ಲಾ ಕಡೆ ಅಸಮಾಧಾನ ಇಣುಕಿದೆ. ಇಂದಿರಾ ಗಾಂಧಿ ಒಳ್ಳೆಯವರಿರಬಹುದು. ಆದರೆ ಇಲ್ಲಿನ ಲೀಡರುಗಳೆಲ್ಲ ಹಾಗಿಲ್ಲವಲ್ಲ—ಎನ್ನುತ್ತಾರೆ ಅವರು.

ಪಕ್ಷಾಂತರ?

೪) ಇನ್ನೊಂದು ಓಟಿನ ಗಂಟಾದ ಬ್ರಾಹ್ಮಣರ ನಿಲುವು ಈ ಸಲ ವಿಚಿತ್ರವಾಗಿ ಡೋಲಾಯಮಾನವಾಗಿದೆ. ಶೃಂಗೇರಿ ಕಡೆಯವರಿಗೆ ರಾಮಯ್ಯ ಎಂದರೆ "ಊರು–ಮನೆಯವ." ಅಲ್ಲದೆ, ಬೇರೆಯವರಂತೆ ರಾಜಕೀಯ ಸೇಡು ತೀರಿಸಲು ಹೋಗದೆ, ತನ್ನ ಹತ್ತಿರ ಬಂದು, ಯಾವಾಗ ಬಂದರೂ ಗೌರವದಿಂದ ಕಂಡಿದ್ದಾರೆ. ಬ್ರಾಹ್ಮಣರು ಎಂತ ಭೇದ ತೋರಿಸಿಲ್ಲ. ಆದೂ ಅಲ್ಲದೆ, ಹಲವು ಬ್ರಾಹ್ಮಣ ಹುಡುಗರಿಗೆ ಸಹಾಯ ಮಾಡಿದ್ದಾರೆ. ವೈಕುಂಠಪುರ ಊರು ಹೊಳೆಯ ಪಕ್ಕದಲ್ಲಿದ್ದರೂ ಕುಡಿವ ನೀರಿಗಾಗಿ ಹೊಳೆಯಿಂದ ಹೊರಬೇಕಿತ್ತು. ಅಲ್ಲಿಗೆ ಈ ವರ್ಷ ಕುಡಿವ ನೀರಿನ ಯೋಜನೆ ಮಂಜೂರಾಗಿರುವುದು ಊರವರಿಗೊಂದು ವರದಾನ. ಇಷ್ಟು ಸಾಲದೆಂದರೆ, ಬ್ರಾಹ್ಮಣರಾದ ರಾಮಯ್ಯನವರು ಪುನಃ ಮುಖ್ಯಮಂತ್ರಿಯಾಗಬಹುದೆಂಬ ಆಶೆ ಬೇರೆ. ಆದ್ದರಿಂದ ಶೃಂಗೇರಿ ತಾಲ್ಲೂಕಿನಲ್ಲಿ ಬ್ರಾಹ್ಮಣರ ಓಟೆಲ್ಲ ಈ ಸಲ ರಾಮಯ್ಯನಿಗೇ ಎಂಬುದು ಒಂದು ವದಂತಿ.

ಅಲ್ಲಿ ಹೀಗಾದರೆ, ಕೊಪ್ಪ ತಾಲ್ಲೂಕಿನಲ್ಲಿ, ಬ್ರಾಹ್ಮಣರು ಹೆಚ್ಚಾಗಿರುವ ಹಳ್ಳಿಗಳಲ್ಲಿ, ವಿರೋಧ-ಪಕ್ಷಗಳ ಒಕ್ಕೂಟದಲ್ಲಿರುವವರೇ ಬ್ರಾಹ್ಮಣರ ಮಧ್ಯೆ ಒಂದು ಪ್ರಚಾರ ನಡೆಸಿದ್ದಾರೆಂದು ವರದಿ. "ಗೋವಿಂದ ಗೌಡರು ಬ್ರಾಹ್ಮಣದ್ವೇಷಿಗಳು. ಬೇಗಾನೆ ಹಾಗಲ್ಲ. ಅಲ್ಲದೆ ಬೇಗಾನೆ ಗೆದ್ದರೆ ಗುಂಡೂರಾವ್‌ಗೆ ಬೆಂಬಲ ಹೆಚ್ಚಿ ಅವರು ಪುನಃ ಮುಖ್ಯ ಮಂತ್ರಿ ಆಗುವ ಸಾಧ್ಯತೆ ಹೆಚ್ಚುತ್ತದೆ",ಎಂಬಂಥ ಪ್ರಚಾರವನ್ನು ಇಲ್ಲಿ ನಡೆಸಿದ್ದಾರೆ. ಎಷ್ಟರ ಮಟ್ಟಿಗೆಂದರೆ, ಉಳಿದೆಲ್ಲ ಜಾತಿಗಳ ಓಟುಗಳೂ ವಿಭಾಗವಾಗಿವೆ; ಬ್ರಾಹ್ಮಣರೆಲ್ಲ ಯಾರಿಗೆ ಓಟು ಹಾಕುತ್ತಾರೆಂಬುದರ ಮೇಲೆ ಇಡೀ ಫಲಿತಾಂಶ ಅವಲಂಬಿಸಿದೆ ಎನ್ನುವವರೂ ಇದ್ದಾರೆ.

ಆದರೆ ಇನ್ನು ಕೆಲವು ಬ್ರಾಹ್ಮಣರು ಇದನ್ನು ಒಪ್ಪುವುದಿಲ್ಲ. ಕೆಗ್ಗದ ಸೀಮೆಯವರ ನಿಲುವಿನಲ್ಲಿ ಯಾವ ಬದಲಾವಣೆಯೂ ಇಲ್ಲ ಎಂದು ಹೇಳಲಾಗಿದೆ. ಶೃಂಗೇರಿಯಲ್ಲಿ ಕೆಲವರು ಈ ಅಭಿಪ್ರಾಯಗಳನ್ನು ತೀವ್ರವಾಗಿ ಖಂಡಿಸುತ್ತಾರೆ. ಈ ವರೆಗೆ ವಿರೋಧ ಪಕ್ಷಗಳನ್ನು ಬೆಂಬಲಿಸಿಕೊಂಡು ಬಂದು, ಈಗ ಯಾವುದೇ ಕಾರಣಕ್ಕೆ ಬದಲಾಯಿಸಿದರೆ ಅದು ಪಕ್ಷಾಂತರ ಮಾಡಿದಂತೆಯೇ ಎನ್ನುತ್ತಾರೆ ಅವರು. ಶೃಂಗೇರಿಯ ಪ್ರಮುಖ ಬ್ರಾಹ್ಮಣ ಮುಂದಾಳುಗಳೊಬ್ಬರು ಈ ವದಂತಿಗಳನ್ನು ಒಪ್ಪಲಿಲ್ಲ. "ಎಲ್ಲೋ ಮೂರ್ನಾಲ್ಕು ಜನ 'ಮುಖಂಡ'ರೆನ್ನಿಸಿಕೊಂಡವರು ಹೇಳಿಬಿಟ್ಟರೆ ಜನ ಕೊಟ್ಟು ಬಿಡ್ತಾರೇನ್ರಿ ಓಟ್ನ?" ಎಂದರವರು. ಆದರೆ ನಾವು ಮಾತಾಡಿಸಿದ ಹಲವಾರು ಬ್ರಾಹ್ಮಣರು ಮಾತ್ರ ಈ ವದಂತಿಗಳಿಗೆ ಪುಷ್ಟಿ ಕೊಡುವ ಮಾತನ್ನೇ ಆಡಿದರು.

ಭಾಜಪಾ ಕಾರ್ಯಕರ್ತರು ತಟಸ್ಥ?

ಇನ್ನು, ಭಾಜಪಾದ ಅಭ್ಯರ್ಥಿಯನ್ನು ನಿಲ್ಲಿಸಲಿಲ್ಲ ಎಂಬ ಕಾರಣಕ್ಕಾಗಿ ಭಾಜಪಾ ಕಾರ್ಯಕರ್ತರು ಪ್ರಚಾರ ಕಾರ್ಯದಲ್ಲಿ ಸಕ್ರಿಯವಾಗಿಲ್ಲ ಎಂದು ಒಬ್ಬ ಪ್ರಮುಖ ಕಾರ್ಯಕರ್ತರು ನಮಗೆ ಹೇಳಿದರು. ಇದು ಸ್ವಲ್ಪ ಮಟ್ಟಿಗೆ ನಿಜವಿರಬಹುದಾದರೂ ಕೆಲ–ಕೆಲವು ಕಾರ್ಯಕರ್ತರು ಎಂದಿನಂತೆಯೇ ಸಕ್ರಿಯರಾಗಿರುವುದೂ ಕಾಣುತ್ತಿದೆ.

ವರ್ತಕರ ಸಹಾನುಭೂತಿ ಬೇಗಾನೆಗೆ?

ಶೃಂಗೇರಿಯಲ್ಲಿ ವರ್ತಕ ಸಮುದಾಯ ಬೇಗಾನೆಯವರಿಗೆ ಸಹಾನುಭೂತಿ ತೋರಿಸುವುದೆಂದು ಹೇಳಲಾಗಿದೆ. ಅವರಿಗಿರುವ ಕೆಲವು ತೀವ್ರ ಸಮಸ್ಯೆಗಳು, ಕಾನೂನಿನ ತೊಡಕುಗಳು ಮುಂತಾದುವುಗಳ ಪರಿಹಾರಕ್ಕೆ ಈ ಮಾರ್ಗ ಎನ್ನಲಾಗಿದೆ.

ಕಾಂಗ್ರೆಸ್ಸಿನೊಳಗೆ ದುಸುಮುಸು

ಕಾಂಗ್ರೆಸ್ ಪಕ್ಷದೊಳಗೇ "ಎಲ್ಲವೂ ಸರಿಯಾಗಿಲ್ಲ." ತಮಗೆ ಪ್ರಚಾರಕ್ಕೆ ಸರಿಯಾದ ಸೌಕರ್ಯಗಳನ್ನೊದಗಿಸಿಲ್ಲ ಎಂಬುದು ಕಾರ್ಯಕರ್ತರ ದೂರು. "ಏನು ಪ್ರಚಾರ ಮಾಡ್ತೀರಯ್ಯ?ಎಲ್ಲಿ ನೋಡಿದರೂ 'ಅವರ'ದೇ ಬ್ಯಾನರ್‌ಗಳು, ಬರಹಗಳು, ಬಾವುಟಗಳು, ಭಿತ್ತಿ ಪತ್ರಗಳು ಕಾಣುತ್ತಿವೆ?" ಎಂದು ಈಚೆಗೆ ರಾಮಯ್ಯ ಕಾರ್ಯಕರ್ತರನ್ನು ತರಾಟೆಗೆ ತೆಗೆದುಕೊಂಡದ್ದೂ ಇದೆ. ಕೊಪ್ಪ ತಾ||ನಲ್ಲಿ ಕಾಂಗ್ರೆಸ್ಸಿನೊಳಗಿನ ಜಗಳ ಕೈ ಕೈ ಮಿಲಾಯಿಸುವ ಮಟ್ಟಕ್ಕೂ ಹೋಗಿತ್ತೆಂದು ವರದಿ. ಶೃಂಗೇರಿ ತಾ||ನಲ್ಲಿ ಅವರಿಗೆ ಕಾರ್ಯಕರ್ತರೇ ಸಿಗುತ್ತಿಲ್ಲ ಎಂದು ಎದುರು ಪಕ್ಷದವರು ಹೇಳುತ್ತಾರೆ. "ಈಗ ಅಲ್ಲಿ ಕೆಲಸ ಮಾಡುತ್ತಿರುವವರೂ ಮನಃ ಪೂರ್ವಕವಾಗಿಲ್ಲ. ಅರ್ಧಕ್ಕರ್ಧ ಜನ ಗೋವಿಂದ ಗೌಡರಿಗೆ ಬೆಂಬಲ ಕೊಡುವವರೇ" ಎಂದು ಅವರ ವಾದ.

ನ.ರಾ.ಪುರ ತಾ||ನಲ್ಲಂತೂ ಕ್ರಾಂತಿ ರಂಗದ ಅಧ್ಯಕ್ಷ ಹೆಚ್.ಎಸ್.ಕೃಷ್ಣಯ್ಯ, ಜನತಾದ ಮಾಗ ಚಂದ್ರಶೇಖರ ಅವರುಗಳಿಗೆ ಪೂರ್ಣ ವಿಶ್ವಾಸ. "ತಾಲ್ಲೂಕಿನಲ್ಲಿ ಮುಕ್ಕಾಲು ಭಾಗ ಓಟು ನಮಗೇ" ಎಂದು ಕೃಷ್ಣಯ್ಯ ಹೇಳಿದರು.

ಬೇಗಾನೆ ಕಾರ್ಯಕ್ರಮಗಳಿಗೆ ಅಡ್ಡಿ

ಹಲವಾರುಕಡೆ ರಾಮಯ್ಯನವರ ಭಾಷಣಕ್ಕೆ ಅಡ್ಡಿ ಪಡಿಸಲಾಗಿದೆ. ಹಾಲ್ಮತ್ತೂರು, ತೆಂಗಿನ ಮನೆ ಮುಂತಾದ ಕಡೆ ಅವರಿಗೆ ಪ್ರಶ್ನೆಗಳನ್ನು ಕೇಳಿ ಉತ್ತರಕ್ಕೆ ಒತ್ತಾಯಿಸಲಾಯಿತು. ಹಲವಾರು ಕಡೆ ಪ್ರಚಾರ ಸಭೆಗಳು ರದ್ದಾದುವು ಅಥವಾ ಬೇಗನೆ ಬರದಲ್ಲಿ ಮುಗಿದುವು. ಈ ಬಗ್ಗೆ ಬೇಗಾನೆ ಬಹಳ ಕೋಪಗೊಂಡಿದ್ದಾರೆ. ವಿರೋಧ ಪಕ್ಷದವರು ಈ ರೀತಿ ಉದ್ರೇಕಿಸುವುದು ಸರಿಯಲ್ಲವೆಂದೂ, ತಾವು ಗೆಲ್ಲುವ ಭರವಸೆ ಇಲ್ಲದ್ದರಿಂದ ಹತಾಶರಾಗಿ ಅವರು ಹೀಗೆ ಮಾಡುತ್ತಿದ್ದಾರೆಂದೂ ಅವರು ಭಾಷಣಗಳಲ್ಲಿ ಹೇಳುತ್ತಿದ್ದಾರೆ.

ಕಳೆದ ಸಲ ೧೪ ಸಾವಿರ ಮತಗಳ ಅಂತರದಿಂದ ಗೆದ್ದ ತಾನು ಈ ಸಲ ಇನ್ನೂ ೩–೪ ಸಾವಿರ ಮತ ಹೆಚ್ಚಿಗೆ ಗಳಿಸುವುದಾಗಿಯೂ, ತಮ್ಮ ಅವಧಿಯಲ್ಲಿ ಅಷ್ಟು ಅಭಿವೃದ್ಧಿ ಕಾರ್ಯಗಳಾಗಿರುವುದಾಗಿಯೂ ಬೇಗಾನೆ ಹೇಳುತ್ತಾರೆ.

ಗೋವಿಂದೇಗೌಡರು ಮಾತ್ರ ಸರಳವಾಗಿ, ಚುಟುಕಾಗಿ, "ನಾನು ಒಳ್ಳೆಯವನೆನ್ನಿಸಿದ್ದರೆ ಮಾತ್ರ ಓಟು ಕೊಡಿ" ಎಂದು ಕೇಳುತ್ತಿದ್ದಾರೆ.

ಬಹಿಷ್ಕಾರ: ನಷ್ಟ ಯಾರಿಗೆ?

ಈ ಸಲದ ಇನ್ನೊಂದು ಬೆಳವಣಿಗೆಯೆಂದರೆ ಹಲವಾರು ಹಳ್ಳಿಗಳವರು ತಮ್ಮ ಊರಿನ ಬಗೆಹರಿಯದ ಸಮಸ್ಯೆಗಳನ್ನು ಮುಂದಿಟ್ಟು ಚುನಾವಣೆ ಬಹಿಷ್ಕರಿಸುವ ನಿರ್ಧಾರ ಕೈಗೊಂಡಿರುವುದು. ಕ್ಷೇತ್ರದ ಹತ್ತಾರು ಹಳ್ಳಿಗಳಿಂದ ಇಂಥ ವರದಿಗಳು ಬಂದಿವೆ. ಹರಿಜನರೂ ಸಹ ಚುನಾವಣೆ ಬಹಿಷ್ಕರಿಸಿರುವ ವರದಿಗಳಿವೆ.

ಈ ಬಹಿಷ್ಕಾರದಿಂದಾಗುವ ಮತಗಳ ನಷ್ಟದಿಂದ ಕಾಂಗ್ರೆಸ್ಸಿಗೆ ಲಾಭವಾಗುವ ಸಾಧ್ಯತೆ ಹೆಚ್ಚು. ಏಕೆಂದರೆ, ಸರ್ಕಾರದಿಂದ ತಮ್ಮ ಸಮಸ್ಯೆ ಬಗೆಹರಿದಿಲ್ಲವೆಂದು ಪ್ರತಿಭಟಿಸುವವರು, ಆ ಮಟ್ಟಿನ ಪ್ರಜ್ಞೆ ಬೆಳೆಸಿಕೊಂಡಿರುವವರು ಸಾಮಾನ್ಯವಾಗಿ ಕಾಂಗ್ರೆಸ್ಸಿಗೆ ಮತ ಹಾಕುವವರಲ್ಲ.

ಇಷ್ಟೆಲ್ಲ ಹೇಳಿದ ಮೇಲೂ....

ಈ ಎಲ್ಲ ಅಂಶಗಳನ್ನೂ ಗಮನಿಸಿದಾಗ ಯಾವುದೇ ಅಭ್ಯರ್ಥಿಗೆ ಪರ ಅಥವಾ ವಿರೋಧವಾದ ಅಂಶಗಳು ತಕ್ಕಡಿಯ ಎರಡು ಕಡೆಗೂ ಸಮನಾಗಿ ಬೀಳುತ್ತಿವೆ. ಆದ್ದರಿಂದ ಫಲಿತಾಂಶ ಹೀಗೇ ಆದೀತೆಂದು ಅಂದಾಜು ಮಾಡುವುದು ತೀರ ಕಷ್ಟದ್ದಾಗಿದೆ.

ಪ್ರವಾಹದ ಮೇಲು ಮೇಲಿನ—ದೃಷ್ಟಿಗೆ, ಅಂದಾಜಿಗೆ ಎಟುಕುವ—ಅಲೆಗಳನ್ನು ಗಮನಿಸಿದರೆ ಬೇಗಾನೆ ಗೆಲ್ಲುವುದು ತೀರ ಕಷ್ಟವೆಂದು ಕಾಣುತ್ತದೆ. ಆದರೆ ತಳಮಟ್ಟದಲ್ಲಿ ನಡೆಯುವ ಬೆಳವಣಿಗೆಗಳೇ ಯಾವಾಗಲೂ ನಿರ್ಣಾಯಕವಾಗುವುದರಿಂದ, ಕೊನೆಯ ಎರಡು ದಿನದ ಚಟುವಟಿಕೆಗಳನ್ನು ನಿರ್ಲಕ್ಷಿಸುವಂತಿಲ್ಲ. ಆದರೆ ಅದೂ ಸಹ ಹಿಂದಿನಷ್ಟು ನೂರಕ್ಕೆ ನೂರು ಫಲ ಕೊಡುತ್ತಿಂದು ಈ ಬಾರಿ ಹೇಳುವಂತಿಲ್ಲ.

ಬೇಗಾನೆಯವರೇ ಬಂದು ಮೇಲೆ ಗೆದ್ದರೂ "ಹಿಂದಿನಂತೆ ೧೦–೧೫ ಸಾವಿರವಲ್ಲ ಅಂತರ ಈ ಬಾರಿ ಬರುವುದಿಲ್ಲ; ಒಂದೆರಡು ಸಾವಿರ ಅಂತರದಲ್ಲಿ ಗೆಲ್ಲಬಹುದು" ಎಂಬುದು ಸಾಮಾನ್ಯವಾಗಿ ಕೇಳಿ ಬರುವ ಮಾತು.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ:
ಸಿರಿಮನೆ ನಾಗರಾಜ್.
ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ